# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು

## ಸಿ ಸಿ ನಂಃ607/2019

## ಚಾಸಾ-3/ಪ್ರಾಸಾ-3

**ಪ್ರಮಾಣ ವಚನ ಭೋಧಿಸಲಾಯಿತು.** **ದಿನಾಂಕಃ02.04.2025**

ಹೆಸರು : ಮಹೇಶ್ ಕುರಿ ತಂದೆ ಮಹಾಗುಂಡಪ್ಪ

ವಯಸ್ಸು : **36** ವರ್ಷ

ಉದ್ಯೋಗ : ಅಟೆಂಡರ್, ಜಗಳೂರು ಸರ್ಕಾರಿ ಆಸ್ಪತ್ರೆ

ವಿಳಾಸ : ಜಗಳೂರು ಟೌನ್

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ನಾನು ಜಗಳೂರು ಸರ್ಕಾರಿ ಆಸ್ಪತ್ರೆಯಲ್ಲಿ 2014 ರಿಂದ ಇಲ್ಲಿಯವರೆಗೆ ಅಟೆಂಡರ್ ಆಗಿ ಕರ್ತವ್ಯ ಮಾಡುತ್ತಿದ್ದೇನೆ. ಚಾಸಾ2, 4 ರವರು ಜಗಳೂರು ಸರ್ಕಾರಿ ಆಸ್ಪತ್ರೆಯ ಸಿಬ್ಬಂದಿಯಾಗಿ ಕರ್ತವ್ಯ ಮಾಡಿರುತ್ತಾರೆ. ಚಾಸಾ8 ರವರು ಪರಿಚಯ ಇರುತ್ತಾರೆ.

ಆರೋಪಿ ನಂಃ1 ಮತ್ತು 2 ನನಗೆ ಪರಿಚಯ ಇರುತ್ತಾರೆ. ನನಗೆ ದಿಃ09.01.2019 ರಂದು ನನಗೆ ಮದ್ಯಾಹ್ನ 02.00 ರಿಂದ 08.00 ಗಂಟೆಯವರೆಗೆ ಕರ್ತವ್ಯ ಮುಗಿಸಿಕೊಂಡು ಮನೆಗೆ ಹೋಗಿರುತ್ತೇನೆ. ಚಾಸಾ1 ರವರು ನನಗೆ ಪರಿಚಯ ಇರುತ್ತಾರೆ. ಅವರು ಸದರಿ ದಿನ ರಾತ್ರಿ ಪಾಳಿ ವೈದ್ಯರಾಗಿ ಕರ್ತವ್ಯ ಮಾಡಿರುತ್ತಾರೆ. ನಾನು ಮನೆಯಲ್ಲಿ ಇದ್ದಾಗ ರಾತ್ರಿ ಸುಮಾರು 09.30 ಗಂಟೆಗೆ ಜಗಳೂರು ಸರ್ಕಾರಿ ಆಸ್ಪತ್ರೆಯಲ್ಲಿ ಗಲಾಟೆಯಾಗುತ್ತಿದ್ದು ನನಗೆ ಕೇಳಿಸಿರುತ್ತದೆ. ನಂತರ ನಾನು ಆಸ್ಪತ್ರೆಗೆ ಹೋಗಿರುತ್ತೇನೆ. ಚಾಸಾ1 ರವರ ಜೊತೆ ಆರೋಪಿ ನಂಃ1 ಮತ್ತು 2 ರವರು ಗಲಾಟೆ ಮಾಡುತ್ತಿದ್ದರು. ಆರೋಪಿಗಳು ಚಾಸಾ1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿರುತ್ತಾರೆ. ನಂತರ ನಾನು ಮನೆಗೆ ಹಿಂದಿರುಗಿರುತ್ತೇನೆ. ನನಗೆ ಆರೋಪಿಗಳು ಯಾವುದೇ ತೊಂದರೆ ನೀಡಿರುವುದಿಲ್ಲ. ಚಾಸಾ5 ಮತ್ತು 6 ರವರು ಗಲಾಟೆ ಬಿಡಿಸಿರುತ್ತಾರೆ.

**(**ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸದರಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಸೂಕ್ತ ಕಾರಣಗಳನ್ನು ನೀಡಿದ ಮೇರೆಗೆ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು**).**

**<u>ಪಾಟೀ ಸವಾಲುಃ</u>** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**-**

ಚಾಸಾ1 ರವರಿಗೆ ಆರೋಪಿಗಳು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸಾಕ್ಷಿ ನಾನು ದೂರ ಇದ್ದ ಕಾರಣ ಸರಿಯಾಗಿ ಕೇಳಿಸಿರುವುದಿಲ್ಲ ಹಾಗೂ ನಾನು ನೋಡಿರುವುದಿಲ್ಲ ಎಂದು ಹೇಳುತ್ತಾರೆ. ಆರೋಪಿಗಳು ನನಗೆ, ಚಾಸಾ2 ಮತ್ತು 4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. ನಾನು ಗಲಾಟೆಯನ್ನು ನೋಡಿರುತ್ತೇನೆ ಎಂದು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲುಃ-ಆರೋಪಿ ಪರ ವಕೀಲರಿಂದಃ</u>**

(ಆರೋಪಿಗಳ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಕಾರ ಇಲ್ಲದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**<u>ಮರು ವಿಚಾರಣೆಃ</u> ಇರುವುದಿಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ**.)**

**ಓ ಹೇ ಕೇ ಸರಿ ಇದೆ**

**ಸಹಿ**

**ಪ್ರ.ದ.ನ್ಯಾ.ದಂ., ಜಗಳೂರು**